ಅ) ತುಮಕೂರು ಹಾಲು ಉತ್ಪಾದಕರ ಸಹಕಾರ ಸಂಘ ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮದಿಂದ ಮಿನಿ ಡೈರಿ ಮತ್ತು ಪಶುಸಂಗೋಪನೆಗಾಗಿ ರೂಪಿಸಿರುವ ಸ್ಕೀಂ ಮೂಲಕ ಪಡೆದ ಅನುದಾನ ಎಷ್ಟು ?

ಆ) ಸದರಿ ಅನುದಾನವನ್ನು ವೆಚ್ಚ ಮಾಡಲು ಫಲಾನುಭವಿಗಳನ್ನು ಆಯ್ಕೆ ಮಾಡಲು ಇರುವ ಮಾರ್ಗಸೂಚಿಗಳೇನು ? ಮಾರ್ಗಸೂಚಿಯಂತೆ ಫಲಾನುಭವಿಗಳನ್ನು ಗುರುತಿಸಲಾಗಿದೆಯೇ ?

ಇ) ಈ ಯೋಜನೆಯಲ್ಲಿ ಅಕ್ರಮ ನಡೆದಿದ್ದು ಮಧ್ಯವರ್ತಿಗಳ ಮುಖಾಂತರ ಇಲಾಖೆಯವರು ಹಸುಗಳ ಖರೀದಿಯಲ್ಲಿ ದುರುಪಯೋಗ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದರೆ ಈ ಬಗ್ಗೆ ಸರ್ಕಾರದ ಕ್ರಮವೇನು ?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಒಟ್ಟು ರೂ. 66,17,700-00ಗಳನ್ನು ಅನುದಾನವಾಗಿ ಪಡೆಯಲಾಗಿದೆ.

ಆ) ಮಾರ್ಗಸೂಚಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಸದರಿ ಮಾರ್ಗಸೂಚಿಗಳಂತೆ ಫಲಾನುಭವಿಗಳನ್ನು ಗುರುತಿಸಲಾಗಿದೆ.

ಇ) ಈ ಬಗ್ಗೆ ಯಾವುದೇ ಅಕ್ರಮ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಅನುಬಂಧ

ಸದರಿ ಅನುದಾನವನ್ನು ವೆಚ್ಚ ಮಾಡಲು ಫಲಾನುಭವಿಗಳನ್ನು ಆಯ್ಕೆ ಮಾಡಲು ಇರುವ ಮಾರ್ಗ ಸೂಚಿಗಳು

(ಅ) ಮಿನಿ ಡೈರಿ ಯೋಜನೆಯಡಿಯಲ್ಲಿ ಆಯ್ಕೆ ಮಾಡುವಾಗ ಅನುಸರಿಸಬೇಕಾದ ಕೆಬಿಸಿಡಿಸಿ ನಿಗಮವು ನಿಗದಿ ಪಡಿಸಿರುವ ಈ ಕೆಳಕಾಣಿಸಿದಂತಿರುವ ಮಾರ್ಗ ಸೂಚಿಗಳನ್ನು ಅನುಸರಿಸಲಾಗುತ್ತಿದೆ.

1. ಕನಿಷ್ಟ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಪಾಸು ಅಥವಾ ವ್ಯಾಸಂಗ ಮುಗಿಸಿರಬೇಕು ಹಾಗೂ ವಿದ್ಯಾರ್ಹತೆ ಬಗ್ಗೆ ವೃದೀಕರು ಸರ್ಟಿಫೀಕೇಟ್ ಹಾಜರು ಪಡಿಸಬೇಕು.
2. ವಯಸ್ಸು ಕನಿಷ್ಟ 18 ವರ್ಷ, ಗರಿಷ್ಟ 40 ವರ್ಷದ ಒಳಗಿರಬೇಕು.
3. ಹೈನುಗಾರಿಕೆಯಲ್ಲಿ ವಿಶೇಷ ತರಬೇತಿ ಹೊಂದಿದ್ದ ಹಸುಗಳನ್ನು ಸಾಕುವುದರಲ್ಲಿ ಅನುಭವವಿರಬೇಕು.
4. ಫಲಾನುಭವಿಗಳು ಯೋಜನೆಯ ಶೇಕಡಾ 5ರಷ್ಟು ವಂತಿಕೆ ರೂ. 4,250.00ಗಳನ್ನು ಕಟ್ಟಲು ಬದ್ದರಾಗಿರಬೇಕು.
5. ಫಲಾನುಭವಿಯ ವಾರ್ಷಿಕ ವರಮಾನ ರೂ. 22,000 ಮೀರಿರಬಾರದು.

6. ಫಲಾನುಭವಿಯು ಕನಿಷ್ಟ ಒಂದು ಎಕರೆ ನೀರಾವರಿ ಸೌಲಭ್ಯ ಅಥವಾ ಕೃಷಿ ಜಮೀನು ಹೊಂದಿರಬೇಕು.

7. ಫಲಾನುಭವಿಗಳು ಸಾಲ ಪಡೆಯಲಿರುವುದಕ್ಷಕ ಇಬ್ಬರು ಜಾಮೀನು ನೀಡತಕ್ಕದ್ದು.

8. ಫಲಾನುಭವಿಗಳು ಒಮ್ಮೆ ಖರೀದಿ ಮಾಡಿದ ಹಸುಗಳನ್ನು ಯಾವುದೇ ಕಾರಣದಿಂದ ಬಿಸಿಎಂ: ಒಕ್ಕೂಟದ ಅನುಮತಿ ಇಲ್ಲದೆ ಮಾರಾಟ ಮಾಡಲು ಅಥವಾ ಬದಲಾಯಿಸಲು ಅವಕಾಶವಿರುವುದಿಲ್ಲ.

9. ಮಿನಿ ಡೈರಿ ಸಲಾ ಪಡೆದ ಫಲಾನುಭವಿಗಳು ಉತ್ಪಾದಿಸಿದ ಹಾಲನ್ನು ಅವರ ವ್ಯಾಪ್ತಿಯಲ್ಲಿನ ಹಾಗೂ ಶಿಫಾರಸ್ಸು ಮಾಡಿರುವ ಸಂಘಕ್ಕೆ ಮಾತ್ರ ಹಾಲು ಸರಬರಾಜು ಮಾಡಲು ಬದ್ಧರಾಗಿರತಕ್ಕದ್ದು ಹಾಗೂ ಅವರು ಪಡೆದ ಸಾಲದ ಕಂತನ್ನು ಬಡವಾಡೆಯಲ್ಲಿ ಕಡಿತ ಮಾಡಿ ಉಳಿಕೆ ಹಣ ಪಡೆಯಲು ಮಾತ್ರ ಬದ್ಧರಾಗಿರಬೇಕು.

10. ಈ ಯೋಜನೆಯ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ : ಕರ್ನಾಟಕ ಹಾಲು ಮಹಾಮಂಡಳಿ ; ತುಮಕೂರು ಹಾಲು ಒಕ್ಕೂಟದ ಸಂಯೋಜನೆಯ ಮೆಮೊರಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್‌ನಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಿರುತ್ತದೆ.

11. ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಹಿಂದುಳಿದ ವರ್ಗಗಳೆಂದು ಗುರ್ತಿಸಿ, ಅಂಗೀಕರಿಸಿರುವ ಪ್ರವರ್ಗ-1 ಮತ್ತು ಪ್ರವರ್ಗ -2 ಎನಲ್ಲಿ ಬರುವ ಜಾತಿಯವರಿಗೆ ಶೇಕಡ 70 ರಷ್ಟನ್ನು ಹಾಗೂ ಪ್ರವರ್ಗ-3 ಎ ಮತ್ತು 3 ಬಿ ನಲ್ಲಿ ಬರುವ ಜಾತಿಯವರೆಗೆ ಶೇಕಡ 30ರಷ್ಟನ್ನು ಕಡ್ಡಾಯವಾಗಿ ನೀಡತಕ್ಕದ್ದು ಹಾಗೂ ಒಕ್ಕೂಟಕ್ಕೆ ನೀಡಿರುವ ಗುರಿ 160ರಲ್ಲಿ ಶೇಕಡ 30 ಭಾಗದಷ್ಟು ಮಹಿಳೆಯರಿಗೆ ನೀಡಬೇಕಾಗಿದೆ.

12. ಈ ಸಾಲ ಯೋಜನೆಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಗ್ರಾಮೀಣ ನಿರುದ್ಯೋಗಿಯುವ ಜನತೆಗೆ ಆಧ್ಯತೆಯನ್ನು ತಪ್ಪದೆ ನೀಡಬೇಕು.

(ಆ) ಹಿಂದುಳಿದ ವರ್ಗಗಳ ಸಂಬಂಧಿಸಿದ ಫಲಾನುಭವಿಗಳನ್ನು ಆಯ್ಕೆ ಮಾಡಲು ಮಾರ್ಗಸೂಚಿಗಳು:

1. ಅರ್ಜಿದಾರನು : ಳು ಸರ್ಕಾರದ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಡಿ 150 ಬಿಸಿಎ 94 ದಿನಾಂಕ:17.9.94ರ ಪ್ರಕಾರ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರಬೇಕು ಅಥವಾ ಸರ್ಕಾರವು ಕಾಲಕಾಲಕ್ಕೆ ಹಿಂದುಳಿದ ವರ್ಗಗಳೆಂದು ಗುರುತಿಸಿ ಅಂಗೀಕರಿಸಿದ ಗುಂಪು ಪ್ರವರ್ಗಕ್ಕೆ ಸೇರಿದವರಾಗಿರಬೇಕು.

2. ಅರ್ಜಿದಾರನು : ಳು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

3. ಅರ್ಜಿದಾರನು : ಳು ಕುಟುಂಬದ ವಾರ್ಷಿಕ ವರಮಾನವು 10,000.00 ರೂ. ಗಳನ್ನು ಮೀರಿರಬಾರದು ಅಥವಾ ಕಾಲ ಕಾಲಕ್ಕೆ ಸರ್ಕಾರವು ಸಿಗದಿ ಪಡಿಸಿರುವ ಕುಟುಂಬ ವಾರ್ಷಿಕ ವರಮಾನದ ಮಿತಿಗೊಳಪಟ್ಟಿರಬೇಕು.

4. ಅರ್ಜಿದಾರನು : ಳು ಹಸು ಸಾಕುವುದರಲ್ಲಿ ಸಾಕಷ್ಟು ಅನುಭವವಿರಬೇಕು.

5. ಅರ್ಜಿದಾರನು : ಳು ಹಣಕಾಸು ಸಂಸ್ಥೆ : ಬ್ಯಾಂಕ್ : ಸೊಸೈಟಿ : ಕಾರ್ಪೊರೇಷನ್ ಬೋರ್ಡ್ ಮತ್ತಿತರ ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆದು ಸುಸ್ಥಿದಾರಾಗಿರಬಾರದು ಹಾಗೂ ಅವನ : ಳ ಕುಟುಂಬದ ಸದಸ್ಯರು ಸುಸ್ಥಿದಾರರಾಗಿರಬಾರದು ಮತ್ತು ಯಾವುದೇ ಆರ್ಥಿಕ ಸಂಸ್ಥೆಯಲ್ಲಿ ಬಾಕಿ ಸಾಲವನ್ನು ಹೊಂದಿರಬಾರದು.

7. ಅರ್ಜಿದಾರನು : ಳು ಹಸುಗಳನ್ನು ಕಟ್ಟಲು ಸಾಕಷ್ಟು ಸ್ಥಳಾವಕಾಶವನ್ನು ಹೊಂದಿರಬೇಕು.

6. ಅರ್ಜಿದಾರನು : ಳು ಹಾಲು ಉತ್ಪಾದಕರ ಸಹಕಾರಿ ಸಂಘದ ಪ್ರಾಥಮಿಕ ಸದಸ್ಯತ್ವವನ್ನು ಹೊಂದಿದವರಾಗಿರಬೇಕು ಹಾಗೂ ಸಂಘದ ಬೈಲಾ ಪ್ರಕಾರ ಸದಸ್ಯತ್ವದಲ್ಲಿನ ಇತರ ಷರತ್ತುಗಳನ್ನು ಪೂರ್ಣಗೊಳಿಸಿಸುವವರಾಗಿರಬೇಕು.

ಶ್ರೀ ಟಿ.ಬಿ. ಜಯಚಂದ್ರ : ಸಭಾಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವನ್ನು ಕೊಡತಕ್ಕ ಸಂದರ್ಭದಲ್ಲಿ 66 ಲಕ್ಷ ರೂಪಾಯಿಗಳನ್ನು ಈ ಮಿನಿ ಡೈರಿ ಸ್ಕೀಮಿಗೋಸ್ಕರ ನೀವು ಕೆ.ಎಂ.ಎಫ್ ಮುಖೇನ ಇವತ್ತು ಖರ್ಚು ಮಾಡಿದ್ದೀರಿ. ನಾನು ಹಿಂದೆ ಸದನದಲ್ಲಿ ಕೇಳಿದಂಥ ಪ್ರಶ್ನೆಗೆ ಉತ್ತರ ಕೊಟ್ಟಿದ್ದೀರಿ. ಸುಮಾರು 2033 ರಾಸುಗಳನ್ನು ಕೊಂಡು ಕೊಂಡು ಬಂದಿದ್ದೇವೆಂಬ ಮಾತನ್ನು ಹೇಳಿದ್ದೀರಿ. ಟೋಟಲ್ ಗ್ರಾಂಟ್ ಲೆಕ್ಕಹಾಕಿದರೆ, ಅನೇಕ ಕೋಟಿ ರೂಪಾಯಿಗಳಾಗುತ್ತದೆ. ನನ್ನ ಆತಂಕದ ಕೊನೆಪ್ರಶ್ನೆ ಏನೆಂದರೆ, ಇದಕ್ಕೊಂದು ಪರ್ಚೇಸ್ ಕಮಿಟಿ ಎಂದು ಇದೆ. ರೈತರೇ ಸ್ವೇಚ್ಛೆಯಾಗಿ ಹೋಗಿ ದನಗಳನ್ನು ಗುರುತಿಸತಕ್ಕಂಥ ಒಂದು ಪದ್ಧತಿ ಇದೆ. ಆದರೆ, ಯಾವ ರೈತರು ಕೂಡ ಎಲ್ಲೂ ಹೋಗಿಲ್ಲ. ಅಧಿಕಾರಿಗಳೇ ಮಿನಿ ಡೈರಿ ಹತ್ತಿರ ಕೆಲವು ಹಸುಗಳನ್ನು ತಂದು ಕೊಟ್ಟರು ಎಂದು ನನ್ನ ಆಕ್ಷೇಪ; ಒಟ್ಟು 2,700 ಹಸುಗಳನ್ನು ಕೊಡುವಂಥ ಸಂದರ್ಭದಲ್ಲಿ, ಇದು ಕಾಗದದಲ್ಲಿ ಮಾತ್ರ 2700 ಎಂದು ಉಳಿಯಿತೇ ವಿನಹ, ಹಣ ವಿತರಣೆಯಾಯಿತೆ ಹೊರತು ಸರಿಯಾದ ಕೆಲಸ ಆಗಿಲ್ಲ. ಏಕೆಂದರೆ, ಕೆ.ಎಂ.ಎಫ್.ನಲ್ಲಿ ಒಂದು ಬಾಡಿ ಇಲ್ಲ. ಬರೀ ಅಧಿಕಾರಿಗಳು ಮತ್ತು ಡಾಕ್ಟರುಗಳನ್ನು ಬಿಟ್ಟರೆ ಬೇರೆ ಯಾರೂ ಇಲ್ಲ. ಈ ರೀತಿಯಾಗಿ ತುಮಕೂರಿನಲ್ಲಿ ಮಧ್ಯವರ್ತಿಗಳು ಸೇರಿಕೊಂಡು ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಆಗಿರುತ್ತದೆ.

ಅಧ್ಯಕ್ಷರು : ಮಧ್ಯವರ್ತಿಗಳು ಎಂದರೆ ಯಾರು?

ಶ್ರೀ ಟಿ.ಬಿ. ಜಯಚಂದ್ರ : ಅಲ್ಲಿ ಕೆಲವರು ರಿಟೈರ್ಡ್, ಡಿಸ್‌ಮಿಸ್ ಡಾಕ್ಟರುಗಳ ಇದ್ದಾರೆ. ತುಮಕೂರಿನಲ್ಲಿ ಹಸುಗಳು ತಂದಂತೆ ರೆಕಾರ್ಡ್‌ಗಳನ್ನು ಕ್ರಿಯೇಟ್ ಮಾಡುತ್ತಾರೆಯೇ ವಿನಹ ಇಲ್ಲಿಯವರೆಗೂ ಅವರ ಗೈಡ್‌ಲೈನ್ಸ್‌ನ್ನು ಅನುಸರಿಸುತ್ತಾ ಇಲ್ಲ.

MR. SPEAKER : The body is under an Administrator, according to you. ಮಧ್ಯವರ್ತಿಗಳು ಎಂದರೆ, Touts or Brokers ಅವರು ಪೊಲಿಟೀಷಿಯನ್ಸ್ ಅಥವಾ ಆಫೀಸರ್ಸ್.

ಶ್ರೀ ಟಿ.ಬಿ. ಜಯಚಂದ್ರ : Touts ಇದ್ದಾರೆ ಮತ್ತು ಬ್ರೋಕರ್ಸ್ ಇದ್ದಾರೆ. ಅವರು ಆಫೀಸರ್ಸ್. ಅಲ್ಲಿ ಡಾಕ್ಟರುಗಳು ಕೆಲವರು ಇದ್ದಾರೆ. ಅವರಿಗೇ ಅದೇ ಕಸುಬು, ಅದು ಬಿಟ್ಟರೆ ಬೇರೆ ಕಸಬು ಇಲ್ಲ.

ನಿಮ್ಮ ಯಾವ ನಿಯಮಾವಳಿಗಳನ್ನೂ ಪಾಲಿಸದೇ ಇವತ್ತು ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಆಗಿದೆ. ಏಕೆಂದರೆ, ನಿಮಗೆ ಗೊತ್ತಿಲ್ಲದ ವಿಚಾರ ಇಲ್ಲ.

ಶ್ರೀ ಬಿ.ಬಿ. ನಿಂಗಯ್ಯ ; ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ನಾವು ಸ್ಪಷ್ಟವಾದ ಉತ್ತರಗಳನ್ನು ಒದಗಿಸಿದ್ದೇವೆ. ಅವರು ಇದರಲ್ಲಿ ಅವ್ಯವಹಾರ ನಡೆದಿದೆ ಎನ್ನತಕ್ಕಂಥ ಪ್ರಶ್ನೆ ಎತ್ತಿದ್ದಾರೆ. ಇದರ ಬಗ್ಗೆ ಏನಾದರೂ ಲಿಖಿತವಾಗಿ ಅವರು ದೂರು ಕೊಟ್ಟರೆ, ಏಕೆಂದರೆ ಫಲಾನುಭವಿಗಳಿಗೆ ಆಯ್ಕೆ ಮಾಡತಕ್ಕ ಸಂದರ್ಭದಲ್ಲಿ ಜಿಲ್ಲಾಪಂಚಾಯ್ತಿಯ ಸಿ.ಇ.ಓ. ಇರುತ್ತಾರೆ. ಮಿಲ್ಕ್ ಯೂನಿಯನ್ನಿನ ಎಂ.ಡಿ. ಇರುತ್ತಾರೆ ಅಷ್ಟಲ್ಲದೆ, ಡಿಸ್ಟ್ರಿಕ್ಟ್ ಮ್ಯಾನೇಜರ್ ಕೆ.ಬಿ.ಡಿ.ಸಿ. ಈ ಮೂರು ಜನ ಆಯ್ಕೆ ಮಾಡುತ್ತಾರೆ. ಒಂದು ಯೂನಿಟ್ಟಿಗೆ ಎರಡು ಹಸುಗಳನ್ನು ಕೊಡುತ್ತಾರೆ. ಮತ್ತು ಫಲಾನುಭವಿಗೆ 450 ರೂಪಾಯಿಗಳನ್ನು ಮಾತ್ರ ಕೊಡಬೇಕೆಂದು ಹೇಳಿದ್ದೇವೆ. ಉಳಿದಂತೆ ಒಂದು ಹಸುವಿಗೆ 8550 ರೂಪಾಯಿಗಳನ್ನು ಸರ್ಕಾರದವರು ಕೊಡುತ್ತೇವೆ. ಎಸ್‌ಸಿ/ ಎಸ್‌ಟಿ ಕಾರ್ಪೊರೇಷನ್‌ನಿಂದ ಮತ್ತು ಬಿ ಸಿ ಡಿ ಸಿ ಯಿಂದ ಒಟ್ಟು 20 ಸಾವಿರ ಹಸುಗಳನ್ನು ಕೆ ಎಂ ಎಫ್ ಮೂಲಕ ಈ ರಾಜ್ಯದಲ್ಲಿ ಕೊಡುತ್ತೇವೆ. ನೀವು ಅವ್ಯವಹಾರ ನಡೆದಿದೆ ಎಂಬುದನ್ನು ಲಿಖಿತವಾಗಿ ಕೊಟ್ಟರೆ, ಸರ್ಕಾರ ಅದಕ್ಕೆ ತನಿಖೆ ನಡೆಸುತ್ತದೆ, ವಿಚಾರಣೆ ನಡೆಸುತ್ತದೆ. ತಪ್ಪಿತಸ್ಥರು ಯಾರೇ ಇದ್ದರೂ ಸಹ ಅವರನ್ನು ರಕ್ಷಣೆ ಮಾಡತಕ್ಕ ಪ್ರಶ್ನೆ ಇಲ್ಲ. ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ನಾನು ವಿಧಾನ ಸಭೆಯಲ್ಲಿ ಎರಡನೇ ಬಾರಿ ಪ್ರಶ್ನೆ ಮಾಡುತ್ತಿದ್ದೇವೆ. ಅವ್ಯವಹಾರ ನಡೆದಿದೆ ಎಂಬುದು ನಿಮಗೂ ಗೊತ್ತಿದೆ. ನೀವೇನು ಮಾಡಿದಿರಿ. ಸಾಮೂಹಿಕವಾಗಿ ಅಲ್ಲಿರತಕ್ಕ ಎಲ್ಲಾ ಅಧಿಕಾರಿಗಳನ್ನೂ ಇದರಲ್ಲಿ ಶಾಮೀಲಾಗಿದ್ದರೆ ಎಂಬ ಕಾರಣಕ್ಕೋಸ್ಕರ ವರ್ಗಾವಣೆ ಮಾಡಿದ್ದೀರಿ. ಸರ್ಕಾರಕ್ಕೆ ಮಾಹಿತಿ ಇಲ್ಲ ಎಂದಲ್ಲ. ನೀವು ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟ ಇಲ್ಲದೇ ಇರಬಹುದು. ಇದು ಎಲ್ಲರಿಗೂ ಗೊತ್ತಿರತಕ್ಕಂಥಾದ್ದೆ. ಇವತ್ತ ನಿಯಮಾವಳಿಗಳಲ್ಲಿ ಇದೆ. ನಾನು ಆಲಿಗೇಷನ್‌ಮಾಡುವುದು ಬಿಡಿ. ಇವತ್ತು ನಿಮ್ಮ ಗೈಡ್‌ಲೈನ್‌ಗೆ ವ್ಯತಿರಿಕ್ತವಾಗಿ ನಡೆದಿರುವುದರಿಂದ, ನೀವು ಎನ್‌ಕ್ವೈರಿ ಮಾಡಿದರೆ ಗೊತ್ತಾಗುತ್ತದೆ.

MR. SPEAKER : Mr. Jayachandra, it engulps time. See problem is very simple. In Mini Dairy ತಾವು ಅವ್ಯವಹಾರ ನಡೆದಿದೆ ಎಂದು ಹೇಳುತ್ತೀರಿ. ಸರ್ಕಾರದ ಪರವಾಗಿ ಅವರು ಹೇಳುತ್ತಾ, ಅವ್ಯವಹಾರ ನಡೆದಿದ್ದರೆ ಖಚಿತವಾಗಿ ಮಾಹಿತಿ ಕೊಟ್ಟರೆ ತಕ್ಷಣ ಎನ್‌ಕ್ವೈರಿಗೆ ಆರ್ಡರ್ ಮಾಡುತ್ತೇನೆಂದು ಹೇಳಿದರು. ಮಿನಿ ಡೈರಿ ಯಾರಿಗೆ ಸ್ಯಾಂಕ್ಷನ್ ಮಾಡಿದ್ದಾರೆ, ಎಲ್ಲಿ ಹಣ ವಿತರಣೆಯಾಗಿದೆ, ಎಲ್ಲಿ ಅನಿಮಲ್ಸ್ ಇಲ್ಲ you list-out those cases. Previously you had brought one incident to my notice. I did not allow it to go without being attended. You please give specific information to me. I will direct as to what kind of enquiry should take place.

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೇ, ನಾನು ಇದನ್ನು ಬರವಣಿಗೆಯಲ್ಲೂ ಕೊಡುತ್ತೇನೆ. ಸಿ.ಓ.ಡಿ. ಎನ್‌ಕ್ವೈರಿ ಮಾಡಿಸಿ.

ಅಧ್ಯಕ್ಷರು : ಇಲ್ಲಿ ಯಾರೂ ಎನ್‌ಕ್ವೈರಿ ಮಾಡದೇ ಇದ್ದರೆ, ಸಿ.ಓ.ಡಿ.ಗೆ ಹೋಗಬಹುದು. ಇನ್‌ಫ್ಲೂಯೆನ್ಸ್ ಇದ್ದವರು ಟ್ರಾಫಿಕ್‌ಗೆ ಹೋಗುತ್ತಾರೆ. ಇನ್‌ಫ್ಯೂಯೆನ್ಸ್ ಇಲ್ಲದೇ ಇದ್ದವರು ಸಿ.ಓ.ಡಿ.ಗೆ ಹೋಗುತ್ತಾರೆ. ಸಿ.ಓ.ಡಿ. ಯವರು ಆಕಾಶದಿಂದ ಬಂದಿದ್ದಾರೆಯೇ?

ಶ್ರೀ ಟಿ.ಬಿ. ಜಯಚಂದ್ರ : ಹಾಗಾದರೆ, ಯಾವ ತರಹ ಎನ್‌ಕ್ವೈರಿ ಮಾಡಿಸಿಕೊಡುತ್ತೀರಿ?

ಅಧ್ಯಕ್ಷರು : ನೀವು ನನ್ನ ಕಡೆ ಕೊಡಿ. You please pass-on the information to me. Then we will find some new method. Why do you worry about it?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ತಾವು ಹೇಳಿದರೆ ಏನಾಗುತ್ತದೆ, ಈಗಾಗಲೇ ಒಂದು ಸಮಸ್ಯೆಯಲ್ಲಿದ್ದೀರಿ. ಇನ್ನೊಂದು ಸಮಸ್ಯೆ ಬರುತ್ತದೆ ಎಂದ ಹಾಗೆ ಆಗುತ್ತದೆ.

MR. SPEAKER : So long as you and Mr. Vatal Nagaraj are there, ನಮಗೇನು ಪ್ರಾಬ್ಲಮ್ ಮಾನ್ಯ ಯಡಿಯೂರಪ್ಪನವರು ಇದ್ದಾರೆ, ನೀವು ನನ್ನ bail-out ಮಾಡುತ್ತೀರಿ.

ಸಣ್ಣ ಉಳಿತಾಯ ಯೋಜನೆ ಕುರಿತು

306 - ಡಾ|| ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ಉಳಿತಾಯದಿಂದ 1995-96, 1996-97 ಮತ್ತು 1997-98ನೇ ಸಾಲಿನಲ್ಲಿ ಸಂಗ್ರಹಿಸಲು ನಿಗದಿಗೊಳಿಸಿದ್ದ ಮೊತ್ತವೆಷ್ಟು?

ಆ) ನಿಗದಿಪಡಿಸಿದ ಗುರಿಯನ್ನು ಮುಟ್ಟಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಹೆಚ್ಚಿನ ಮೊತ್ತ ಸಂಗ್ರಹಿಸಲು ಇಲಾಖೆಗೆ ಕೆಲಸ ಪುನರ್ವಿಮರ್ಷಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ನಿಗದಿಪಡಿಸಿದ ಗುರಿ (ರೂ. ಕೋಟಿಗಳಲ್ಲಿ)

ವರ್ಷ	ಒಟ್ಟು	ನಿವ್ವಳ
1995-96	2160	720
1996-97	2160	720
1997-98	1925	550

ಆ) 1995-96 -ಇಲ್ಲ-

1996-97 -ಇಲ್ಲ-